

ದಾಟಿಸುತ್ತಿತ್ತು. ಪ್ರತಿಕ್ರಿಯೆಯ ನಿರೀಕ್ಷೆಯಲ್ಲಿ ಕಾದಿರುತ್ತಿತ್ತು, ನಿಜವಾದ ಅರ್ಥದಲ್ಲಿ. ತಮ್ಮಿಬ್ಬರ ಪದವಿ ಪರೀಕ್ಷೆಯ ಅಂತಿಮ ವರ್ಷ ಮುಗಿಯುವವರೆಗೆ ಈ ವಿಷಯವನ್ನು ತಮ್ಮಿಬ್ಬರಲ್ಲೇ ಬಚ್ಚಿಟ್ಟುಕೊಂಡಿರಲು ಇಬ್ಬರೂ ನಿರ್ಧರಿಸಿದ್ದರು. ಹಾಗೇ ನಡೆದುಕೊಂಡಿದ್ದರು ಕೂಡ. ತದನಂತರ ಒಂದು ತೀರ್ಮಾನಕ್ಕೆ ಬರಲೇಬೇಕಾದ ಅನಿವಾರ್ಯತೆಯಿತ್ತು. ತನ್ನಿಂದ ಮುಂದೆ ಓದಲು ಸಾಧ್ಯವಿಲ್ಲ ಎಂದು ತನ್ನನ್ನು ನಂಬಿಸಿಕೊಂಡುಬಿಟ್ಟಿದ್ದ ವೆಂಕಟೇಶ. ಏನಿದ್ದರೂ ತನ್ನ ಬದುಕು ಹಳ್ಳಿಯಲ್ಲಿ. ಅಪ್ಪ, ಅಮ್ಮನ ಜೊತೆ ಕೃಷಿಕಾರ್ಯದಲ್ಲಿ. ಹೇಳಿಕೊಳ್ಳುವಂಥ ಸ್ಥಿತಿವಂತಿಕೆಯೇನಿಲ್ಲದ ಕುಟುಂಬದಲ್ಲಿ ಅವನ ಓದು, ಅದರಿಂದ ಅವನು ಗಳಿಸಬಹುದಾದ ನೌಕರಿ ಅತ್ಯವಶ್ಯಕವಾಗಿದ್ದರೂ, ಆ ಕುರಿತು ಅವನ ಮನೆಯಲ್ಲಿ ವಿಪರೀತದ ನಿರೀಕ್ಷೆಗಳಿದ್ದರೂ ಸೋತವನಂತೆ ಕೈಚೆಲ್ಲುತ್ತಿರುವ ಅವನ ನಿರುತ್ಸಾಹ ಭಾಮನಿಗೆ ಗಾಬರಿ ಹುಟ್ಟಿಸುತ್ತಿತ್ತು.

'ಓದೋಣ ಕಣೋ, ಎಂ.ಎ. ಮಾಡ್ಕೊಳ್ಳೋಣ. ಇಬ್ರೂ ಕೆಲಸಕ್ಕೆ ಸೇರ್ಕೊಳ್ಳೋಣ. ನಮ್ಮ ಭವಿಷ್ಯ ನಾವೇ ರೂಪಿಸಿಕೊಳ್ಳೋಣ...' ಹುರಿದುಂಬಿಸುತ್ತಿದ್ದಳು ಭಾಮ.

'ಸಾಧ್ಯವಿಲ್ಲ ಕಣೇ. ನನ್ನ ಮಹತ್ವಾಕಾಂಕ್ಷೆ ಅಕ್ಕನ ಜೊತೇನೇ ಸತ್ತು ಹೋಯ್ತು. ನಿಜವಾಗ್ಲೂ ನಾನು ಬುದ್ಧಿವಂತನೇನಲ್ಲ. ನಿನಗೇ ಗೊತ್ತಿದೆ'.

'ಮತ್ಯಾಕೆ ಓದೋಕೆ ಕಾಲೇಜಿಗೆ ಬಂದೆ? ಹಳ್ಳೀಲೇ ಇರಬಹುದಿತ್ತು...'

'ಅಲ್ಲೇ ಇದ್ರೆ ನಂಗೆ ಹುಚ್ಚು ಹಿಡೀತಿತ್ತು. ಮನೆಯವರ ಗೋಳಾಟ ದಿನಾ ನೋಡ್ತಿರೋದು ಎಷ್ಟು ಕಷ್ಟ ಅಂತ ನಿಂಗೆ ಗೊತ್ತಿದೆಯಾ? ಅಲ್ಲಿಂದ ತಪ್ಪಿಸ್ಕಂಡು ಹೊಸ ಪ್ರಪಂಚಕ್ಕೆ ಬಂದ್ರೆ ಸಾಕಾಗಿತ್ತು. ಕಾಲೇಜು ಒಂದು ನೆಪ ಆಯ್ತು...'

'......'

'ನಾನು ನಿಂಗೆ ಸರಿಯಾದೋನಲ್ಲ ಕಣೇ. ಜಾತಿ ಬೇರೆ ಭೂತದ ಹಾಗೆ ಮಧ್ಯ ನಿಂತ್ಕೊಂಡಿದೆ. ಈಗ್ಲೂ ಹೇಳ್ತೀನಿ, ಮರೆತು ಬಿಡು ನನ್ನ. ನಿನ್ನಪ್ಪನ ಯೋಗ್ಯತೆಗೆ ಸರಿಯಾದೋರನ್ನ...'

'ನಿಂಗೆ ಕಪಾಳಕ್ಕೆ ಬಾರಿಸ್ತೀನಿ. ಪರೀಕ್ಷೆ ಮುಗಿದ ಮೇಲೆ ಈ ವಿಷಯ ಮನೇಲಿ ಮಾತಾಡೋಣ ಅಂತ ಅಂದ್ಕೊಂಡಿಲ್ವಾ ನಾವು? ನಿಂಗೆ ಹೆದರಿಕೆಯಾಗ್ತಿದೆಯಾ? ಅದಕ್ಕೇ ಏನೇನೋ ಮಾತಾಡ್ತಿದೀಯಾ?'

'ಹೆದ್ರಿಕೆ ಅಲ್ಲ. ನನ್ನ ಸ್ವಾರ್ಥಕ್ಕೆ ನಂಗೇ ಹೇಸಿಗೆಯಾಗ್ತಿದೆ. ಇಷ್ಟು ಬೇಗ ಅಕ್ಕನ್ನ ಮರೆತು ಮನೇಲಿ ಮದುವೆ ವಿಷಯ ಮಾತಾಡೋದಾ? ಆ ವಿಷಯ ಮಾತಾಡೋ ವಯಸ್ಸಾ ಇದು?'

'ಮದುವೆ ವಿಷಯ ಮಾತಾಡ್ತೀವೇ ಹೊರತು ಈಗ್ಲೇ ಮದುವೆ ಮಾಡ್ಕೋತೀವಿ ಅಂತೀವಾ? ಕಳೀಲಿ ಇನ್ನೂ ನಾಲ್ಕು ವರ್ಷ. ನೀನು ಹಳ್ಳಿಗೆ ಹೊರಟು ಹೋದಿ ಅಂದ್ರೆ ಮತ್ತೆ ನಿನ್ನ ನೋಡೋ ಅವಕಾಶಾನೇ ಸಿಗುತ್ತೋ, ಇಲ್ವೋ? ಮದುವೆ ಅಂತ ನಿಶ್ಚಯ ಮಾಡ್ಕೊಂಡ್ರೆ ಮನಸ್ಸು ಬಂದಾಗ ಭೇಟಿ ಆಗ್ಬೋದು ಅಲ್ವಾ?'

'ಅಷ್ಟೆಲ್ಲಾ ಸಲೀಸು ಅಂತ ಅನ್ಸಲ್ಲಪ್ಪಾ ನಂಗೆ. ಮತ್ತೆಲ್ಲಾ ಹಾಳಾಗ್ಲಿ, ಜಾತಿ...'

'ಹೀಗೆ ಹೆದರ್ತಾ ಕೂತ್ಕೊಂಡ್ರೆ ಈ ಜನ್ಮದಲ್ಲಿ ನಮ್ಮ ಮದುವೆಯಾಗಲ್ಲ. ಮನೇಲಿ ಒಪ್ತಾರೋ, ಬಿಡ್ತಾರೋ ಬೇರೆ ಮಾತು. ಕೇಳೋದು ನಮ್ಮ ಕರ್ತವ್ಯ, ಕೇಳ್ತೀವಪ್ಪಾ...'

'ನಿನ್ನಷ್ಟು ಧೈರ್ಯ ನಂಗೆ ಬರ್ತಿಲ್ಲ...'

'ಬರಿಸ್ಕೋಬೇಕು. ಪ್ರೀತಿ ಮಾಡ್ಬೇಕಾದ್ರೆ ಇದೆಲ್ಲಾ ನೆನಪಾಗ್ಲಿಲ್ವಾ?